**ಒಮಾನ್‌ನ ಗೌರವಾನ್ವಿತ ಸುಲ್ತಾನ್ ಅವರನ್ನು ಭೇಟಿ ಮಾಡಿದ ಪ್ರಧಾನಿ (ಡಿಸೆಂಬರ್ 18, 2025)**

ಡಿಸೆಂಬರ್ 18, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಮಸ್ಕತ್‌ನಲ್ಲಿ ಗೌರವಾನ್ವಿತ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅವರ ಜೊತೆ ದ್ವಿಪಕ್ಷೀಯ ಸಭೆಯನ್ನು ನಡೆಸಿದರು. ರಾಜಭವನಕ್ಕೆ ಆಗಮಿಸಿದ ಪ್ರಧಾನಮಂತ್ರಿ ಅವರನ್ನು ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅವರು ಆತ್ಮೀಯವಾಗಿ ಬರ ಮಾಡಿಕೊಂಡರು ಮತ್ತು ಔಪಚಾರಿಕ ಸ್ವಾಗತ ನೀಡಿದರು.

2. ಉಭಯ ನಾಯಕರು ಪರಸ್ಪರ ಮತ್ತು ನಿಯೋಗ-ಮಟ್ಟದ ಮಾದರಿಗಳಲ್ಲಿ ಸಭೆ ನಡೆಸಿದರು. ಅವರು ಸಮಗ್ರವಾಗಿ ಬಹುಮುಖ ಭಾರತ-ಒಮಾನ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಪರಿಶೀಲಿಸಿದರು ಮತ್ತು ದ್ವಿಪಕ್ಷೀಯ ಸಂಬಂಧಗಳಲ್ಲಿ ಸ್ಥಿರ ಬೆಳವಣಿಗೆಯನ್ನು ಪ್ರಶಂಸಿಸಿದರು. ಈ ವರ್ಷ ಎರಡು ದೇಶಗಳು ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ 70 ವರ್ಷಗಳನ್ನು ಆಚರಿಸುತ್ತಿರುವುದರಿಂದ ಭಾರತ-ಒಮಾನ್ ಸಂಬಂಧಗಳಿಗೆ ಈ ಭೇಟಿ ವಿಶೇಷ ಮಹತ್ವವನ್ನು ಹೊಂದಿದೆ ಎಂದು ಅವರು ಹೇಳಿದರು.

3. ಅವರು ದ್ವಿಪಕ್ಷೀಯ ಸಂಬಂಧಗಳಲ್ಲಿ ಒಂದು ಹೆಗ್ಗುರುತಿನ ಅಭಿವೃದ್ಧಿಯಾಗಿ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ [CEPA] ಕ್ಕೆ ಸಹಿ ಹಾಕುವುದನ್ನು ಸ್ವಾಗತಿಸಿದರು ಮತ್ತು ಇದು ಕಾರ್ಯತಂತ್ರದ ಪಾಲುದಾರಿಕೆಗೆ ಪ್ರಮುಖ ಉತ್ತೇಜನವನ್ನು ನೀಡುತ್ತದೆ ಎಂದು ಹೇಳಿದರು. US$ 10 ಬಿಲಿಯನ್ ದಾಟಿರುವ ದ್ವಿಪಕ್ಷೀಯ ವ್ಯಾಪಾರ ಮೌಲ್ಯದ ಕುರಿತಾಗಿ, ಮತ್ತು ದ್ವಿಪಕ್ಷೀಯ ಹೂಡಿಕೆ ಹರಿವು ಮುಂದುವರಿಯುತ್ತಿದೆ ಎಂದು ತೃಪ್ತಿ ವ್ಯಕ್ತಪಡಿಸಿದ ಪ್ರಧಾನಮಂತ್ರಿಯವರು, CEPA ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಗಮನಾರ್ಹವಾಗಿ ಉತ್ತೇಜಿಸುತ್ತದೆ, ಉದ್ಯೋಗಗಳನ್ನು ಸೃಷ್ಟಿಸುತ್ತದೆ ಮತ್ತು ಎರಡೂ ದೇಶಗಳಲ್ಲಿ ಹಲವಾರು ಅವಕಾಶಗಳನ್ನು ತೆರೆಯುತ್ತದೆ ಎಂದು ಒತ್ತಿಹೇಳಿದರು.

4. ನಾಯಕರು ದೀರ್ಘಾವಧಿಯ ಇಂಧನ ವ್ಯವಸ್ಥೆಗಳು, ನವೀಕರಿಸಬಹುದಾದ ಇಂಧನ ಉದ್ಯಮಗಳು ಮತ್ತು ಹಸಿರು ಹೈಡ್ರೋಜನ್ ಮತ್ತು ಹಸಿರು ಅಮೋನಿಯಾ ಯೋಜನೆಗಳ ಮೂಲಕ ಇಂಧನ ಸಹಕಾರಕ್ಕೆ ಹೊಸ ಒತ್ತು ನೀಡುವುದರ ಬಗ್ಗೆ ಚರ್ಚಿಸಿದರು. ಅಂತಾರಾಷ್ಟ್ರೀಯ ಸೌರ ಮೈತ್ರಿಗೆ ಸೇರುತ್ತಿರುವ ಒಮಾನ್ ಅನ್ನು ಪ್ರಧಾನಮಂತ್ರಿ ಶ್ಲಾಘಿಸಿದರು ಮತ್ತು ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯ ಒಕ್ಕೂಟ ಮತ್ತು ಜಾಗತಿಕ ಜೈವಿಕ ಇಂಧನ ಮೈತ್ರಿಗೆ ಸೇರಲು ಅವರನ್ನು ಆಹ್ವಾನಿಸಿದರು.

5. ಕೃಷಿ ವಿಜ್ಞಾನ, ಪಶುಸಂಗೋಪನೆ, ಜಲಚರ ಸಾಕಣೆ ಮತ್ತು ರಾಗಿ ಕೃಷಿ ಕ್ಷೇತ್ರಗಳಲ್ಲಿನ ಸಹಯೋಗ ಸೇರಿದಂತೆ ಕೃಷಿ ಸಹಕಾರದಿಂದ ಎರಡೂ ದೇಶಗಳು ಪ್ರಯೋಜನ ಪಡೆಯಬಹುದು ಎಂದು ಪ್ರಧಾನಮಂತ್ರಿ ಅವರು ಗಮನಿಸಿದರು.

6. ಶಿಕ್ಷಣ ಕ್ಷೇತ್ರದಲ್ಲಿ ಸಹಕಾರದ ಮಹತ್ವವನ್ನು ಒಪ್ಪಿಕೊಂಡ ಇಬ್ಬರೂ ನಾಯಕರು, ಅಧ್ಯಾಪಕರು ಮತ್ತು ಸಂಶೋಧಕರ ವಿನಿಮಯವು ಪರಸ್ಪರ ಪ್ರಯೋಜನಕಾರಿಯಾಗಿದೆ ಎಂದರು.

7. ಉಭಯ ನಾಯಕರು ಆಹಾರ ಭದ್ರತೆ, ಉತ್ಪಾದನೆ, ಡಿಜಿಟಲ್ ತಂತ್ರಜ್ಞಾನಗಳು, ನಿರ್ಣಾಯಕ ಖನಿಜಗಳು, ಲಾಜಿಸ್ಟಿಕ್ಸ್, ಮಾನವ-ಬಂಡವಾಳ ಅಭಿವೃದ್ಧಿ ಮತ್ತು ಬಾಹ್ಯಾಕಾಶ ಸಹಕಾರದ ಕ್ಷೇತ್ರಗಳಲ್ಲಿ ಸಹಕಾರದ ಬಗ್ಗೆ ಚರ್ಚಿಸಿದರು.

8. ಹಣಕಾಸು ಸೇವೆಗಳ ಕುರಿತು, UPI ಮತ್ತು ಒಮಾನಿ ಡಿಜಿಟಲ್ ಪಾವತಿ ವ್ಯವಸ್ಥೆ, ರೂಪೇ ಕಾರ್ಡ್ ಅಳವಡಿಕೆ ಮತ್ತು ಸ್ಥಳೀಯ ಕರೆನ್ಸಿಗಳಲ್ಲಿ ವ್ಯಾಪಾರದ ನಡುವಿನ ಸಹಕಾರದ ಬಗ್ಗೆ ಅವರು ಚರ್ಚಿಸಿದರು.

9. ರಸಗೊಬ್ಬರ ಮತ್ತು ಕೃಷಿ ಸಂಶೋಧನೆ ಎರಡೂ ಕಡೆಯವರಿಗೆ ಗೆಲುವಿನ ಮೌಲ್ಯದ ಕ್ಷೇತ್ರಗಳಾಗಿವೆ ಮತ್ತು ಜಂಟಿ ಹೂಡಿಕೆಯ ಮೂಲಕ ಈ ಕ್ಷೇತ್ರಗಳಲ್ಲಿ ಹೆಚ್ಚಿನ ಸಹಯೋಗಕ್ಕಾಗಿ ಅವರು ಕೆಲಸ ಮಾಡಬೇಕು ಎಂದು ಪ್ರಧಾನಮಂತ್ರಿ ಹೇಳಿದರು.

10. ಉಭಯ ನಾಯಕರು ಕಡಲ ಕ್ಷೇತ್ರದಲ್ಲಿ ಸೇರಿದಂತೆ ರಕ್ಷಣೆ ಮತ್ತು ಭದ್ರತಾ ಸಹಯೋಗವನ್ನು ಹೆಚ್ಚಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

11. ಒಮಾನ್‌ನಲ್ಲಿ ಭಾರತೀಯ ಸಮುದಾಯದ ಕಲ್ಯಾಣಕ್ಕೆ ನೀಡಿದ ಬೆಂಬಲಕ್ಕಾಗಿ ಪ್ರಧಾನಮಂತ್ರಿ ಅವರು ಸುಲ್ತಾನರಿಗೆ ಧನ್ಯವಾದ ಸಲ್ಲಿಸಿದರು. ಕಡಲ ಪರಂಪರೆ, ಭಾಷಾ ಪ್ರಚಾರ, ಯುವ ವಿನಿಮಯ ಮತ್ತು ಕ್ರೀಡಾ ಬಾಂಧವ್ಯ ಕ್ಷೇತ್ರಗಳಲ್ಲಿ ಹಲವಾರು ಹೊಸ ದ್ವಿಪಕ್ಷೀಯ ಉಪಕ್ರಮಗಳು ಜನರೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಅವರು ಹೇಳಿದರು. ಅವರು ಎರಡೂ ದೇಶಗಳು ಹಂಚಿಕೊಂಡಿರುವ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಚರ್ಚಿಸಿದರು ಮತ್ತು ಕಡಲ ವಸ್ತುಸಂಗ್ರಹಾಲಯಗಳ ನಡುವಿನ ಸಹಯೋಗ ಮತ್ತು ಕಲಾಕೃತಿಗಳು ಮತ್ತು ಪರಿಣತಿಯ ವಿನಿಮಯದ ಮಹತ್ವವನ್ನು ಎತ್ತಿ ತೋರಿಸಿದರು.

12. ನಾಯಕರು ಒಮಾನ್ ವಿಷನ್ 2040 ಮತ್ತು 2047 ರ ಒಳಗೆ ಭಾರತದ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಅಥವಾ ವೀಕ್ಷಿತ್ ಭಾರತ್ ಅಗುವ ಗುರಿಯ ನಡುವಿನ ಹೊಂದಾಣಿಕೆಯನ್ನು ಸ್ವಾಗತಿಸಿದರು, ಮತ್ತು ತಮ್ಮ ಜನರ ಆಕಾಂಕ್ಷೆಗಳನ್ನು ಪೂರೈಸಲು ಪರಸ್ಪರ ಬೆಂಬಲವನ್ನು ತಿಳಿಸಿದರು.

13. ನಾಯಕರು ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು ಮತ್ತು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.

14. ಭೇಟಿಯ ಸಂದರ್ಭದಲ್ಲಿ, CEPA ಜೊತೆಗೆ, ಎರಡೂ ಕಡೆಯವರು ಕಡಲ ಪರಂಪರೆ, ಶಿಕ್ಷಣ, ಕೃಷಿ ಮತ್ತು ಮಿಲೆಟ್ ಕೃಷಿ ಕ್ಷೇತ್ರಗಳಲ್ಲಿ MoU ಗಳು/ವ್ಯವಸ್ಥೆಗೆ ಕೂಡಾ ಸಹಿ ಹಾಕಿದರು. ಫಲಿತಾಂಶಗಳ ಪೂರ್ಣ ಪಟ್ಟಿಯನ್ನು ಇಲ್ಲಿ ನೋಡಬಹುದು [Link]. ಭೇಟಿಯ ಸಂದರ್ಭದಲ್ಲಿ ಅಳವಡಿಸಿಕೊಂಡ ಜಂಟಿ ಹೇಳಿಕೆಯನ್ನು ಇಲ್ಲಿ ನೋಡಬಹುದು [Link].

ಮಸ್ಕತ್

ಡಿಸೆಂಬರ್ 18, 2025